6) ಶ್ರೀ. ಗೋವಿಂದ ಎಂ.ಕಾರಜೋಳ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು – **ಸದಸ್ಯರು**

7) ಶ್ರೀ. ಬಾಲಚಂದ್ರ ಲ. ಜಾರಕಿಹೊಳಿ, ಮಾನ್ಯ ಸಮಾಜ ಕಲ್ಯಾಣ ಸಚಿವರು – **ಸದಸ್ಯರು**

ಈ) ಹಿಂಬಾಕಿ ಹುದ್ದೆಗಳನ್ನು ತುಂಬಲು ಸಚಿವ ಸಂಪುಟದ ಉಪ ಸಮಿತಿಯು ಅಗತ್ಯ ಕಂಡು ಬಂದಾಗಲೆಲ್ಲ ಸಭೇ ಸೇರಿ ಪ್ರಗತಿ ಪರಿಶೀಲನೆ ನಡೆಸುತ್ತಿದೆ.

ಉ) ಇಲಾಖೆಗಳಲ್ಲಿ ಒಟ್ಟು ಗುರುತಿಸಲಾಗಿರುವ 13138 ಹುದ್ದೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ 1302 ಹುದ್ದೆಗಳನ್ನು ವಿವಿಧ ಇಲಾಖೆಗಳಲ್ಲಿ ಭರ್ತಿ ಮಾಡಲಾಗಿದೆ.

ಊ) ಸಚಿವ ಸಂಪುಟ ಉಪಸಮಿತಿ ದಿನಾಂಕ : 18–12–2006 ರಂದು ಸಭೆ ನಡೆಸಿ ಬಾಕಿ ಇರುವ ಎಲ್ಲಾ ಹಿಂಬಾಕಿ ಹುದ್ದೆಗಳನ್ನು ಭರ್ತಿ ಮಾಡಲು ಸೂಚನೆ ನೀಡಿದೆ. ಹಿಂಬಾಲಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

1328 (1797) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಡಿಗೆ ನಿಯಂತ್ರಣ ಮಂಡಳಿಯನ್ನು ಸ್ಥಾಪಿಸಿರುವ ಉದ್ದೇಶಗಳೇನು ಹಾಗೂ ಇದರ ಕೆಲಸವೇನು;

ಆ) ಇದರಿಂದ ಬಾಡಿಗೆದಾರರಿಗೆ ಯಾವ ಅನುಕೂಲಗಳು ದೊರೆಯುತ್ತಿವೆ;

ಇ) ಈ ಕಛೇರಿಗಳು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ;

ಈ) ಬೆಂಗಳೂರಿನಲ್ಲಿ ಎಷ್ಟು ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ;

ಉ) ಇವುಗಳ ಕಾರ್ಯವ್ಯಾಪ್ತಿಗೆ ಬರುವ ಪ್ರದೇಶಗಳು ಯಾವುದು (ಕಛೇರಿಗಳ ವಿಳಾಸ ಮತ್ತು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವಿವರಗಳನ್ನು ಒದಗಿಸುವುದು);

ಊ) ಕಳೆದ ಮೂರು ವರ್ಷಗಳಿಂದ ಬೆಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಾಡಿಗೆ ನಿಯಂತ್ರಣ ಮಂಡಳಿಗಳ ಮೂಲಕ ಇತ್ಯರ್ಥಪಡಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು;

ಋ) ಈ ಪೈಕಿ ಎಷ್ಟು ಪ್ರಕರಣಗಳು ನ್ಯಾಯಾಲಯದ ಮುಂದಿವೆ (ಪೂರ್ಣ ವಿವರಗಳನ್ನು ಒದಗಿಸುವುದು);

ೠ) ಬಾಡಿಗೆ ನಿಯಂತ್ರಣ ಮಂಡಳಿಯ ಮುಂದೆ ಬರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಬಾಡಿಗೆ ನಿಯಂತ್ರಣ ಕಛೇರಿಗಳು ಕರ್ನಾಟಕ ಬಾಡಿಗೆ ನಿಯಮ 2001 ರಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ವ್ಯಾಪ್ತಿಗೆ ನಗರ ಹಾಗೂ ಪಟ್ಟಣ ಪ್ರದೇಶಗಳು ಒಳಪಟ್ಟಿದ್ದು, ಮನೆ ಮಾಲೀಕರು ಮತ್ತು ಬಾಡಿಗೆದಾರರ ಮಧ್ಯೆ ಬರಬಹುದಾದ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವುದು, ಬಾಡಿಗೆ ಠೇವಣಿ ಮಾಡಿಕೊಳ್ಳುವುದು, ಬಾಡಿಗೆದಾರರಿಗೆ ಮೂಲಭೂತ ಸೌಕರ್ಯಗಳನ್ನು ಮಾಲೀಕರು ಅಡ್ಡಪಡಿಸಿದಲ್ಲಿ ಇತ್ಯರ್ಥಪಡಿಸುವುದು. ಬಾಡಿಗೆ ದರ ನಿಗದಿ ಪಡಿಸಲು ಅರ್ಜಿ ನೀಡಿದ್ದಲ್ಲಿ ರಾಜಸ್ವ ನಿರೀಕ್ಷಕರಿಂದ ಮತ್ತು ಮೌಲ್ಯಮಾಪಕರಿಂದ ವರದಿ ತರಿಸಿ, ಬಾಡಿಗೆ ದರ ನಿಗದಿಪಡಿಸುವುದು, ಠೇವಣಿ ಇಟ್ಟ ಬಾಡಿಗೆ ಹಣವನ್ನು ಮನೆ ಮಾಲೀಕರಿಗೆ ನೀಡುವುದು.

ಆ) 1) ಮನೆ ಮಾಲೀಕರು ಬಾಡಿಗೆಯನ್ನು ಪಡೆಯಲು ನಿರಾಕರಿಸಿದಲ್ಲಿ ಬಾಡಿಗೆ ಹಣವನ್ನು ಬಾಡಿಗೆದಾರರು ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿಯಲ್ಲಿ ಠೇವಣಿ ಇಡಬಹುದಾಗಿದೆ.

2) ನಿರ್ದಿಷ್ಟಪಡಿಸಿದ ಬಾಡಿಗೆಯನ್ನು ನಿಯಮದಂತೆ ನಿಗದಿಪಡಿಸುವುದು.

3) ಮನೆ ಮಾಲೀಕರು ವಿದ್ಯುತ್ ನೀರು ಒಳಚರಂಡಿ, ಇತರೆ ಮೂಲಭೂತ ಸೌಕರ್ಯಗಳನ್ನು ತಡೆಹಿಡಿದಿದ್ದಲ್ಲಿ ಅವುಗಳನ್ನು ಇತ್ಯರ್ಥಪಡಿಸಿ, ಸಂಪರ್ಕಕಲ್ಪಿಸಲಾಗುವುದು.

4) ಬಾಡಿಗೆ ಕಟ್ಟಡಕ್ಕೆ ಅವಶ್ಯಕವಾದ ದುರಸ್ತಿಯನ್ನು ಮನೆ ಮಾಲೀಕರು ನಿರ್ವಹಿಸದಿದ್ದ ಸಂದರ್ಭದಲ್ಲಿ ಬಾಡಿಗೆದಾರರು ನೀಡುವ ಮನವಿಯನ್ನು ಪರಿಶೀಲಿಸಿ, ಆದೇಶ ನೀಡಲಾಗುವುದು.

5) ಮನೆ ಮಾಲೀಕರು ಬಾಡಿಗೆ ಹಣಕ್ಕೆ ರಶೀದಿ ನೀಡದಿದ್ದಲ್ಲಿ ಅಧಿನಿಯಮದಂತೆ ರಶೀದಿ ನೀಡಲು ಆದೇಶಿಸಲಾಗುವುದು.

ಇ) ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ) ನಾಲ್ಕು ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.

ಉ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳು.

ಪೂರ್ವ ವಲಯಕ್ಕೆ ಮಹದೇವಪುರ ಸಿಟಿ ಮುನ್ಸಿಪಲ್ ಏರಿಯಾ ಹಾಗೂ ಕೆ.ಆರ್.ಮುನ್ಸಿಪಲ್ ಏರಿಯಾ ಒಳಪಡುತ್ತದೆ.

ದಕ್ಷಿಣ ವಲಯಕ್ಕೆ ಬೊಮ್ಮನಹಳ್ಳಿ ಸಿಟಿ ಮುನ್ಸಿಪಲ್ ಏರಿಯಾ ಮತ್ತು ರಾಜರಾಜೇಶ್ವರಿ ಸಿಟಿ ಮುನ್ಸಿಪಲ್ ಏರಿಯಾ ಒಳಪಡುತ್ತದೆ.

ಉತ್ತರ ವಲಯಕ್ಕೆ ಬ್ಯಾಟರಾಯನಪುರ ಸಿಟಿ ಮುನ್ಸಿಪಲ್ ಏರಿಯಾ ಮತ್ತು ಯಲಹಂಕ ಸಿಟಿ ಮುನ್ಸಿಪಲ್ ಏರಿಯಾ ಒಳಪಡುತ್ತದೆ.

ಪಶ್ಚಿಮ ವಲಯಕ್ಕೆ ಟಿ.ದಾಸರಹಳ್ಳಿ ನಗರ ಪ್ರದೇಶಗಳು ಒಳಪಡುತ್ತದೆ.

a) ಬಾಡಿಗೆ ಮತ್ತು ವಸತಿ ನಿಯಂತ್ರಣಾಧಿಕಾರಿಗಳು – 4

b) ವ್ಯವಸ್ಥಾಪಕರು – 4

c) ಪ್ರಥಮ ದರ್ಜೆ ಸಹಾಯಕರು – 4

d) ಪ್ರಥಮ ದರ್ಜೆ ರಾಜಸ್ವ ನಿರೀಕ್ಷಿಕರು – 20

e) ದ್ವಿತೀಯ ದರ್ಜೆ ಸಹಾಯಕರು – 8

f) ಬೆರಳಚ್ಚುಗಾರರು – 4

g) 'ಡಿ' ದರ್ಜೆ ನೌಕರರು – 20

h) ವಾಹನ ಚಾಲಕರು – 4

ಊ) a) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪೂರ್ವ ವಲಯ – 79

b) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ದಕ್ಷಿಣ ವಲಯ – 92

c) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಉತ್ತರ ವಲಯ – 69

d) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪಶ್ಚಿಮ ವಲಯ – 44

ಋ) a) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪೂರ್ವ ವಲಯ – 29

b) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ದಕ್ಷಿಣ ವಲಯ – 24

c) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಉತ್ತರ ವಲಯ –

d) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪಶ್ಚಿಮ ವಲಯ –

ಋೂ) ಬಾಡಿಗೆ ನಿಯಂತ್ರಣ ಮಂಡಳಿಗಳ ಮುಂದೆ ಬರುವ ಮೂಲಭೂತ ಸೌಕರ್ಯಗಳಾದ ನೀರು, ವಿದ್ಯುತ್, ಒಳಚರಂಡಿ ಸಂಪರ್ಕಗಳ ಬಗ್ಗೆ ಬಂದ ದೂರು ಅರ್ಜಿಗಳನ್ನು ಸ್ವೀಕರಿಸಿ, ಬಂದಂತಹ ಮನವಿಗಳನ್ನು ರಾಜಸ್ವ ನಿರೀಕ್ಷಕರ ಸಹಯೋಗದೊಂದಿಗೆ ಸ್ಥಳ ತನಿಖೆ ನಡೆಸಿ, ವಿಚಾರಣೆ ನಡೆಸಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲಾಗುತ್ತಿದೆ.

1331 (2039) ಶ್ರೀ ಹಾಲಪ್ಪ ಹೆಚ್. (ಹೊಸನಗರ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?